107

II

Total No. of Questions – 15
Total No. of Printed Pages – 4

Regd. No.

# Part - II
# KANNADA, Paper – I
## (Second Language)

Time : 3 Hours] [Max. Marks : 100

I. ಈ ಕೆಳಗಿನ ಪದ್ಯಗಳಲ್ಲಿ **ಒಂದಕ್ಕೆ** ಭಾವಾರ್ಥ ಬರೆಯಿರಿ. 1 × 6 = 6

ಕಲ್ಲಿನಲಿ ಹುಟ್ಟಿ ಕೂಗುವ ಕಪ್ಪೆಗಳಿಗೆಲ್ಲ
ಅಲ್ಲಲ್ಲಿಗಾಹಾರ ತಂದೀವರಾರು
ಬಲ್ಲಿದನು ಕಾಗಿನೆಲೆಯಾದಿಕೇಶವರಾಯ
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ.

**ಅಥವಾ**

ರತ್ನದ ಸಂಕೋಲೆಯಾದಡೆ ತೊಡರಲ್ಲವೆ ?
ಮುತ್ತಿನ ಬಲೆಯಾದಡೆ ಬಂಧನವಲ್ಲವೆ ?
ಚಿನ್ನದ ಕತ್ತಿಯಲ್ಲಿ ತಲೆಹೊಯ್ದಡೆ ಸಾಯದಿರ್ಪರೆ ?
ಲೋಕದ ಭಜನೆಯ ಭಕ್ತಿಯಲ್ಲಿ ಸಿಲುಕಿದಡೆ
ಜನನ ಮರಣ ಬಿಡುವುದೆ ಚೆನ್ನಮಲ್ಲಿಕಾರ್ಜುನಾ ?

II. ಈ ಕೆಳಗಿನ ಎರಡು ಪ್ರಶ್ನೆಗಳಲ್ಲಿ **ಒಂದಕ್ಕೆ** 20 ವಾಕ್ಯಗಳು ಮೀರದಂತೆ ಉತ್ತರಿಸಿ. 1 × 6 = 6

(1) "ಕರುಣಾಳು ರಾಘವನಲ್ಲಿ ತಪ್ಪಿಲ್ಲ" ಎಂಬ ಸೀತೆಯ ನಿಲುವನ್ನು ವಿಶ್ಲೇಷಿಸಿ ಬರೆಯಿರಿ.

(2) ಅಮ್ಮಿಯ ಹೊಲಿಗೆಯ ಕೌಶಲ್ಯವು ಕವಿತೆಯಲ್ಲಿ ಹೇಗೆ ಅಭಿವ್ಯಕ್ತಗೊಂಡಿದೆ ?

III. ಈ ಕೆಳಗಿನ ಎರಡು ಪ್ರಶ್ನೆಗಳಲ್ಲಿ **ಒಂದಕ್ಕೆ 20** ವಾಕ್ಯಗಳು ಮೀರದಂತೆ ಉತ್ತರಿಸಿ. **1 × 6 = 6**

(1) ಕರಿಯನ ಜೀವನ ಹೇಗಿತ್ತು ? ಜನರು ಆತನನ್ನು ಕಾಣುವ ರೀತಿಯನ್ನು ಲೇಖಕರು ಹೇಗೆ ವಿವರಿಸಿದ್ದಾರೆ ?

(2) ನಿರಾಕರಣೆ ಕತೆಯಲ್ಲಿ ಬರುವ ಶಕುಂತಲೆ ವ್ಯಕ್ತಿತ್ವವನ್ನು ವಿವರಿಸಿ ಬರೆಯಿರಿ.

IV. ಈ ಕೆಳಗಿನ ಎರಡು ಪ್ರಶ್ನೆಗಳಲ್ಲಿ **ಒಂದಕ್ಕೆ 20** ವಾಕ್ಯಗಳು ಮೀರದಂತೆ ಉತ್ತರಿಸಿ. **1 × 6 = 6**

(1) 'ಹಸಿರೇ ಉಸಿರು' ಎಂಬುದನ್ನು ಬೋಳೇಶಂಕರನ ಪಾತ್ರದ ಮೂಲಕ ನಾಟಕಕಾರರು ಹೇಗೆ ಸ್ಪಷ್ಟಪಡಿಸಿದ್ದಾರೆ ? ವಿಮರ್ಶಿಸಿ.

(2) ರಾಜಕುಮಾರಿಯ ಹೊಟ್ಟೆನೋವು ಪ್ರಸಂಗದಿಂದ ಬೋಳೇಶಂಕರ ರಾಜನಾದ ಕಥೆಯನ್ನು ತಿಳಿಸಿ.

V. ಈ ಕೆಳಗಿನ ನಾಲ್ಕರಲ್ಲಿ ಯಾವುದಾದರೂ **ಎರಡಕ್ಕೆ** ಸಂದರ್ಭ ಸೂಚಿಸಿ ವಿವರಿಸಿ. **2 × 3 = 6**

(1) ಆಹ ನಿಮ್ಮರಸುತನವೆಮ್ಮಲ್ಲಿ ಮಾಳ್ಪರೇ.

(2) ಚಿಂದಿ ಮನಸುಗಳನು ಜೋಡಿಸಲು ಸೂಜಿ ಇದೆ.

(3) "ನೀನಿನ್ನೂ ನನ್ನನ್ನು ಕ್ಷಮಿಸಲಿಲ್ಲವೇ ?"

(4) ಇನ್ನು ಮುಂದೆ ಅನಗತ್ಯವಾಗಿ ಕೋಪಿಸಿಕೊಳ್ಳುವುದಿಲ್ಲ.

VI. ಈ ಕೆಳಗಿನ ನಾಲ್ವರು ಕವಿ/ಲೇಖಕರಲ್ಲಿ **ಇಬ್ಬರ** ಪರಿಚಯ ಬರೆಯಿರಿ. **2 × 3 = 6**

(1) ಕುವೆಂಪು (2) ಆರಿಫ್ ರಾಜಾ

(3) ಎಚ್. ನರಸಿಂಹಯ್ಯ (4) ವೀಣಾ ಶಾಂತೇಶ್ವರ

VII. ಈ ಕೆಳಗಿನ ನಾಲ್ಕು ಪ್ರಶ್ನೆಗಳಲ್ಲಿ ಯಾವುದಾದರೂ **ಎರಡಕ್ಕೆ** ಸಂಕ್ಷಿಪ್ತವಾಗಿ ಉತ್ತರಿಸಿ. **2 × 3 = 6**

(1) ತನು ಮನ ಧನಗಳನ್ನು ಮರೆಯಲು ಏನನ್ನು ತೋರುತ್ತಾರೆ ?

(2) ಸೀತೆ ಸೌಮಿತ್ರಿಯನ್ನು ಹಿಂತಿರುಗಿ ಹೋಗೆಂದು ಏಕೆ ಹೇಳಿದಳು ?

(3) ಮೆಳ್ಳೆಗಣ್ಣಿನಿಗೆ ಕವಿ ಕೇಳುವ ಪ್ರಶ್ನೆಗಳು ಯಾವುವು ?

(4) ದಿಕ್ಕು ದೆಸೆಯಿಲ್ಲದೆ ಅಲೆಯುತ್ತಿರುವವು ಯಾವುವು ?

VIII. ಈ ಕೆಳಗಿನ ನಾಲ್ಕು ಪ್ರಶ್ನೆಗಳಲ್ಲಿ **ಎರಡಕ್ಕೆ** ಸಂಕ್ಷಿಪ್ತವಾಗಿ ಉತ್ತರಿಸಿ. $2 \times 3 = 6$

(1) ಗಾಂಧಿ ಎಂಬ ಹುಡುಗನ ಕೊನೆಯ ಆಸೆ ಯಾವುದು ?

(2) ವಿಜ್ಞಾನದ ಸಿದ್ಧಾಂತಗಳು ಹೇಗೆ ರೂಪುಗೊಳ್ಳುತ್ತವೆ ?

(3) ಗೌತಮನ ಮನೋಲೋಕವನ್ನು ನಿರಂತರವಾಗಿ ದಹಿಸಿದ ಪ್ರಶ್ನೆಗಳಾವುವು ?

(4) ಶಕುಂತಲೆ ಕಂಚಿನ ಧ್ವನಿಯಿಂದ ದುಷ್ಯಂತನಿಗೆ ಹೇಳಿದ್ದೇನು ?

IX. ಈ ಕೆಳಗಿನ ನಾಲ್ಕು ಪ್ರಶ್ನೆಗಳಲ್ಲಿ **ಎರಡಕ್ಕೆ** ಸಂಕ್ಷಿಪ್ತವಾಗಿ ಉತ್ತರಿಸಿ. $2 \times 3 = 6$

(1) ಸಾವ್ಕಾರಣ್ಣನು ತನ್ನ ಸಹೋದರರಿಗೆ ಆಸ್ತಿಯನ್ನು ಹೇಗೆ ಹಂಚಿದ ?

(2) ಕೋಡಂಗಿಯು ತಾನು ಬೆಳಗ್ಗೆಯಿಂದ ಏನೇನು ಕೆಲಸ ಮಾಡಿದೆನೆಂದು ಹೇಳುತ್ತಾನೆ ?

(3) ಸೈತಾನನ ಆಗಮನವನ್ನು ಭಾಗವತ ಹೇಗೆ ತಿಳಿಸಿದ್ದಾನೆ ?

(4) ಬೋಳೇಶಂಕರ ಏನೆಂದು ಡಂಗುರ ಸಾರುತ್ತಾನೆ ?

X. ಈ ಕೆಳಗಿನ ಎರಡರಲ್ಲಿ **ಒಂದನ್ನು** ಕುರಿತು ಪತ್ರ ಬರೆಯಿರಿ. $1 \times 6 = 6$

(1) ನಿಮ್ಮ ಊರಿಗೆ ರಸ್ತೆ ನಿರ್ಮಿಸಲು ನಿಮ್ಮ ಕ್ಷೇತ್ರದ ಶಾಸಕರಿಗೊಂದು ಪತ್ರ ಬರೆಯಿರಿ.

(2) ನಿಮ್ಮ ಊರಿನ ಜಾತ್ರೆಗೆ ಬರಲು ಗೆಳೆಯ / ಗೆಳತಿಗೊಂದು ಪತ್ರ ಬರೆಯಿರಿ.

XI. (A) ಈ ಕೆಳಗಿನ ಎಂಟು ಸಂಧಿ ಪದಗಳಲ್ಲಿ **ನಾಲ್ಕಕ್ಕೆ** ಸಂಧಿ ಬಿಡಿಸಿ, ಸಂಧಿಯನ್ನು ಹೆಸರಿಸಿ. $4 \times 2 = 8$

(1) ಜತೆಗೂಡಿ (2) ಬಿಸಿಯೂಟ (3) ಹಗಲಿರುಳು (4) ಬಾಲಕರಾಶ್ರಮ

(5) ವಿಜಯೋತ್ಸವ (6) ಲಿಂಗೈಕ್ಯ (7) ಚಿದಾನಂದ (8) ಜಗನ್ಮಾಯೆ

(B) ಈ ಕೆಳಗಿನ ಆರು ಸಮಾಸಗಳಲ್ಲಿ **ಮೂರಕ್ಕೆ** ಸಮಾಸ ಬಿಡಿಸಿ, ಸಮಾಸವನ್ನು ಹೆಸರಿಸಿ. $3 \times 2 = 6$

(1) ಉತ್ತಮೋತ್ತಮ (2) ಹಳಗನ್ನಡ (3) ತಲೆದೂಗಿದನು

(4) ಮುಂಗೈ (5) ಗಿಡಮರಬಳ್ಳಿಗಳು (6) ಮುಕ್ಕಣ್ಣ

(C) ಈ ಕೆಳಗಿನ ಎಂಟು ಪದಗಳಲ್ಲಿ **ಐದಕ್ಕೆ** ಅರ್ಥ ಬರೆಯಿರಿ. $5 \times 1 = 5$

(1) ಮಖ (2) ಮೂಡಲ (3) ಕಾವಳ (4) ರಾಟೆ

(5) ಮೂಸೆ (6) ಅಸಂಗತ (7) ಮೂರ್ತ (8) ಸ್ತಬ್ದ

XII. ಈ ಕೆಳಗಿನವುಗಳಲ್ಲಿ **ಒಂದನ್ನು** ಕುರಿತು ಪ್ರಬಂಧ ಬರೆಯಿರಿ. **1 × 6 = 6**

(1) ಈಗಿರುವುದು ರಾಮ ರಾಜ್ಯವೋ ? ರಾವಣ ರಾಜ್ಯವೋ ?

(2) ಜಲ ಪ್ರಳಯ

(3) ತರಕಾರಿಗಳ ಮಹತ್ವ

XIII. ಈ ಕೆಳಗಿನ **ಎಲ್ಲಾ** ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. **5 × 1 = 5**

(1) ಮಗುವಿನಂತೆ ಯಾರನ್ನು ಸಾಕಿದಳು ?

(2) ಮಗು ಯಾವ ಹಣ್ಣಿನಂತೆ ಕೊಬ್ಬಬಾರದು ?

(3) ನಾಡಿಗೆ ಯಾರ ಕಾಟ ಕೊನೆಗೊಂಡಿದೆ ?

(4) ಮೃಗ ಪಕ್ಷಿಗಳು ಎಲ್ಲಿ ಆಡುತ್ತಿದ್ದವು ?

(5) ಸೀತೆ ಯಾರಲ್ಲಿ ತಪ್ಪಿಲ್ಲವೆಂದಳು ?

XIV. ಈ ಕೆಳಗಿನ **ಎಲ್ಲಾ** ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. **5 × 1 = 5**

(1) ವೈದ್ಯಾಧಿಕಾರಿ ಇಲ್ಲಿಯವರೆಗೆ ಯಾವ ರೀತಿಯ ನ್ಯಾಯವನ್ನು ಕಂಡಿರಲಿಲ್ಲ ?

(2) ನೀರಿಗಾಗಿ ಕರಿಯ ಏನನ್ನು ತರುತ್ತಿದ್ದ ?

(3) ಜ್ಯೋತಿಷ್ಯ ಮುಗ್ಧ ಜನರನ್ನು ಹೇಗೆ ಶೋಷಿಸುತ್ತದೆ ?

(4) ಅಶೋಕನ ಸ್ತಂಭ ಎಲ್ಲಿದೆ ?

(5) ಶಕುಂತಲೆಗೆ ಜೀವನವೊಂದು ಸುಂದರ ಕನಸೆಂದು ನಂಬಿಸಿದಾತ ಯಾರು ?

XV. ಈ ಕೆಳಗಿನ **ಎಲ್ಲಾ** ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. **5 × 1 = 5**

(1) 'ಬದುಕಿನ ಬಗ್ಗೆ ಒಂದೂ ತಕರಾರಿಲ್ಲ' ಎಂದು ಪಿಶಾಚಿಯು ಯಾರ ಬಗ್ಗೆ ಹೇಳುತ್ತದೆ ?

(2) ರಾಜಕುಮಾರಿಗೆ ಬಂದ ರೋಗ ಯಾವುದು ?

(3) ಕತ್ತಲೆಯ ನಿಜ ಜನಕನು ಯಾರು ?

(4) ಸೈನಿಕರು ಯಾವುದಕ್ಕೆ ಜಯವಾಗಲೆಂದರು ?

(5) ಪಿಶಾಚಿಗಳು ಯಾರ ಹೆಸರು ಕೇಳಿದರೆ ಹೆದರುತ್ತವೆ ?